**ಪಿಡಬ್ಲ್ಯೂ** ಃ 1

ಪ್ರಮಾಣ ವಚನ ಭೋದಿಸಿದ ದಿನಾಂಕ ಃ **25.09.2024**

ಮುಂದುವರಿದ ಪಾಟೀ ಸವಾಲುಃ **ಶ್ರೀಯುತ** ಎಸ್ ಎನ್ ಎನ್ ಕೆ **ವಕೀಲರಿಂದಃ** ಪ್ರತಿವಾದಿ ಮತ್ತು **2** ರವರ ಪರಃ

ಭಾಗೀರಥಿರವರು ಮೃತರಾಗುವವರೆಗೆ ಅವರು ಮಾನಸಿಕವಾಗಿ ಸ್ವಾಸ್ಥ್ಯರಿದ್ದರು ಎಂದರೆ ಸರಿ. ಅವರು ಸಂಕಪ್ಪ ನಾಯಕರವರ ಪತ್ನಿ ಎಂದರೆ ಸರಿ. ಸಾಕ್ಷಿಗೆ ಭಾಗೀರಥಿರವರ ಮರಣ ಪ್ರಮಾಣಪತ್ರವನ್ನು ತೋರಿಸಲಾಗಿ ಅದನ್ನು ಅವರು ಒಪ್ಪಿದ ಕಾರಣ ಸದ್ರಿ ಮರಣ ಪ್ರಮಾಣಪತ್ರವನ್ನು ನಿಡಿ-**2** ಎಂದು ಗುರುತಿಸಲಾಯಿತು. ನನ್ನ ತಾಯಿ ಭಾಗೀರಥಿರವರು ಅಸೌಖ್ಯದಲ್ಲಿದ್ದಾಗ ಅವರು ನಿಧನರಾಗುವ ಒಂದೂವರೆ ತಿಂಗಳು ಮುಂಚೆ ಅವರನ್ನು ಭೇಟಿಯಾಗಲು ಬಂದಿದ್ದೆನು ಆದರೆ ಬಿಡಲಿಲ್ಲ. ನನ್ನ ಹಿರಿಯ ಅಣ್ಣ ಎಂದರೆ ನಾರಾಯಣ ನಾಯ್ಕ. ನನ್ನ ಅಣ್ಣ ನಾರಾಯಣ ನಾಯ್ಕನ ಮೇಲೆ ನನಗೆ ಯಾವುದೇ ಆರೋಪ ಇಲ್ಲ. ನಾರಾಯಣ ನಾಯ್ಕ ರವರು ತಮ್ಮ ಪ್ರತಿವಾದಿ ಪತ್ರದಲ್ಲಿ ಏನೆಲ್ಲಾ ವಿಚಾರವನ್ನು ನಮೂದು ಮಾಡಿದ್ದಾರೆ ಎಂದು ನನಗೆ ನೆನಪಿಲ್ಲ. ನಾರಾಯಣ ನಾಯ್ಕ ಮತ್ತು ನನ್ನ ನಡುವೆ ಯಾವುದೇ ವೈಮನಸ್ಸು ಇಲ್ಲ. ನಾರಾಯಣ ನಾಯ್ಕರವರು ಮನೆಯಲ್ಲಿ ನಡೆಯುತ್ತಿದ್ದ ವಿಚಾರಗಳ ಬಗ್ಗೆ ನನಗೆ ತಿಳಿಸುತ್ತಿದ

ನನ್ನ ತಾಯಿ ಮೃತರಾಗುವ ಒಂದೂವರೆ ತಿಂಗಳು ಮುಂದೆ ನಾನು ಆಕೆಯನ್ನು ನೋಡಲು ಬಂದಾಗ ನಾರಾಯಣ ನಾಯ್ಕರವರ ಜೊತೆ ಮಾತನಾಡಿದ್ದೆ. ಆಗ ಕುಟುಂಬದಲ್ಲಿ ಏನೆಲ್ಲಾ ನಡೆಯುತ್ತಿದೆ ಎಂಬ ಬಗ್ಗೆ ನಾರಾಯಣ ನಾಯ್ಕರವರು ನನಗೆ ತಿಳಿಸಿದ್ದಾರೆ ಎಂದರೆ ಸರಿ. ನನ್ನ ತಾಯಿ ಮೃತರಾದ **1-2** ತಿಂಗಳ ಒಳಗೆ ನಾನು ವಾಸಿಸುತ್ತಿದ್ದ ಕುಶಾಲ ನಗರಕ್ಕೆ ನಾರಾಯಣ ನಾಯ್ಕರವರು ಬಂದು ನನ್ನನ್ನು ಭೇಟಿ ಮಾಡಿದ್ದಾರೆಂದರೆ ಸರಿ. ಆಗ ಕುಟುಂಬದ ವಿಚಾರಗಳನ್ನು ನಾರಾಯಣ ನಾಯ್ಕ ರವರು ನನಗೆ ತಿಳಿಸಿದ್ದಾರೆ ಎಂದರೆ ಸರಿ. ನನ್ನ ತಾಯಿ

ಮೃತರಾಗುವ ಒಂದೂವರೆ ತಿಂಗಳ ಮುಂಚೆ ನಾನು ಊರಿಗೆ ಆಕೆಯನ್ನು ನೋಡಲು ಬಂದಾಗ ಒ.ಎಸ್. ನಂ.40/2008 ರಲ್ಲಿ ರಾಜಿ ಮಾಡಿಕೊಂಡಿರುವ ವಿಚಾರ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. 2008 ರಲ್ಲಿ ನಾನು ಎಲ್ಲಿ ವಾಸ ಮಾಡುತ್ತಿದ್ದೆನು ಎಂದು ನನಗೆ ನೆನಪಿಲ್ಲ.

ದಾವಾ ಜಮೀನಿನಲ್ಲಿ ಒಂದುವರೆ ಸೆಂಟ್ ಜಾಗದಲ್ಲಿ ನಾಗನ ಕಟ್ಟೆ ಬರುತ್ತದೆಂದರೆ ಸರಿ. ನಾಗನ ಕಟ್ಟೆ ಸರ್ವೆ ನಂ. 84/1ರ ಸ್ವತ್ತಿನಲ್ಲಿ ಇದೆ ಎಂದರೆ ನಮಗೆ ಗೊತ್ತಿಲ್ಲ. ನನ್ನ ಪ್ರಕಾರ ನನ್ನ ಅಣ್ಣ ನಾರಾಯಣ ನಾಯ್ಕ ಸತ್ಯ ವಿಚಾರಗಳನ್ನೇ ಹೇಳುತ್ತಾರೆ ಎಂದರೆ ಸರಿ. ಸರ್ವೆ ನಂ. **84/1**ರ ಆರ್ ಟಿ ಸಿ ಯಲ್ಲಿ ಒಂದೂವರೆ ಸೆಂಟ್ ಬಾಬ್ತು ನಾರಾಯಣ ನಾಯ್ಕ, ಭಾಗೀರಥಿ, ಸುನಂದ , ಉದಯಶಂಕರ , ಗೀತಾ , ನಮಿತ , ನಮ್ರುತ ಎನ್ನುವವರ ಜಂಟಿ ಹೆಸರಿನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಾಗುವುದಿಲ್ಲ.

ನನ್ನ ತಾಯಿಯ ಜೊತೆ ನಾನು ಒಳ್ಳೆಯ ಭಾಂದವ್ಯದಲ್ಲಿ ಇದ್ದೆನು. ನನ್ನ ತಾಯಿಯ ವಿರುದ್ಧ ನನಗೆ ಯಾವುದೇ ಆರೋಪ ಇಲ್ಲ. ನನ್ನ ತಾಯಿ ಯಾವುದೇ ದಾಖಲಾತಿಗಳನ್ನು ಅವರ ವಿವೇಚನೆಯಿಂದಲೇ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅವರಿಗೆ ವಿದ್ಯಾಭ್ಯಾಸ ಇರಲಿಲ್ಲ ಎಂದು ನುಡಿಯುತ್ತಾರೆ.

**11** ನೇ ಪ್ರತಿವಾದಿ ಶಿವಪ್ರಸಾದ್ ರವರು ನನಗೆ ಎಷ್ಟು ವರ್ಷದಿಂದ ಪರಿಚಯ ಎಂದರೆ ಸಾಕ್ಷಿಃಯು ಅವರು ಪರಿಚಯವಿರುತ್ತಾರೆ ಆದರೆ ಎಷ್ಟು ವರ್ಷದಿಂದ ಎಂದು ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. **2010** ನೇ ಇಸವಿಯ ಮುಂಚಿನಿಂದ ಅವರ ಪರಿಚಯ ಇತ್ತಾ ಎಂದರೆ ನೆನಪಿಲ್ಲ. ಅಸಲು ದಾವಾ **40/2008** ರಲ್ಲಿ ರಾಜಿ ಡಿಕ್ರಿಯಾವ ಮುಂಚಿನಿಂದಲೂ **11** ನೇ ಪ್ರತಿವಾದಿರವರ ಪರಿಚಯವಿರುತ್ತದೆ. ಸಾಕ್ಷಿಗೆ ದಿ. **22.11.2014** ರ ಕರಾರುಪತ್ರದ ಜೆರಾಕ್ಸ್ ಪ್ರತಿ ತೋರಿಸಲಾಗಿ ಸೂಚಿಸಿದ ಪ್ರಶ್ನೆ ಅದರಲ್ಲಿ ನಮೂದಿಸಿರುವಂತೆ **2** ಲಕ್ಷ ರೂಪಾಯಿ ಮಾತ್ರ ನನಗೆ ಶಿವಪ್ರಸಾದ್ ಶೆಟ್ಟಿರವರ ಬ್ಯಾಂಕ್ ಖಾತೆ ಮೂಲಕ ನೀಡಲಾಗಿದೆ

ಎಂದರೆ ಸಾಕ್ಷಿಯು ಖಾಲಿ ಪತ್ರಕ್ಕೆ ನನ್ನ ಸಹಿ ಪಡೆದಿದ್ದು ಬಳಿಕ ಅದರಲ್ಲಿ ಈಗ ಕಾಣಿಸಿರುವ ಬರವಣಿಗೆ ಯನ್ನು ಮೂಲ ದಾಖಲೆಯಲ್ಲಿ ಶಿವಪ್ರಸಾದ್ ಶೆಟ್ಟಿಯವರು ತಯಾರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯ ಮೂಲ ದಾಖಲೆ ಶಿವಪ್ರಸಾದ್ ಶೆಟ್ಟಿಯವರ ಬಳಿ ಇದೆಯಾ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ.

ಶಿವಪ್ರಸಾದ್ ಶೆಟ್ಟಿಯವರು ಚೆಕ್ಕಿನ ಮೂಲಕ ನನಗೆ 2 ಲಕ್ಷ ರೂ.ಗಳನ್ನು ಸಂದಾಯ ಮಾಡಿದ್ದಾರೆ ಎಂದರೆ ನನಗೆ ನೆನಪಿಲ್ಲ. ಶಿವಪ್ರಸಾದ್ ಶೆಟ್ಟಿ ಮತ್ತು ನನ್ನ ನಡುವೆ ಎಷ್ಟು ಕರಾರು ಪತ್ರಗಳು ಆಗಿವೆ ಎನ್ನುವ ಪ್ರಶ್ನೆಗೆ ಅವರು ಖಾಲಿ ಪತ್ರಗಳಿಗೆ ಸಹಿ ಪಡೆದಿರುವುದು ಬಿಟ್ಟರೆ ಯಾವುದೇ ಕರಾರು ಪತ್ರ ಆಗಿಲ್ಲ ಎಂದು ನುಡಿಯುತ್ತಾರೆ, ಶಿವಪ್ರಸಾದ್ ಶೆಟ್ಟಿಯವರು ಖಾಲಿ ಪತ್ರಗಳಿಗೆ ದಿ. **22-11-2014** ರಂದು ಸಹಿ ಪಡೆದರಾ ಅಥವಾ ಆನಂತರವಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ. ಖಾಲಿ ಪತ್ರಗಳಿಗೆ ನನ್ನ ಸಹಿ ಪಡೆದು ಶಿವಪ್ರಸಾದ್ ಶೆಟ್ಟಿಯವರು ಕ್ರಯದ ಕರಾರು ಪತ್ರವನ್ನು **2014** ರಲ್ಲಿ ಅಥವಾ **2015** ರಲ್ಲಿ ಸೃಷ್ಟಿ ಮಾಡಿದ್ದಾರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಈ ಕೇಸಿನ ಸ್ಥಿರಾಸ್ತಿಗಳಿಗೆ ಸಂಬಧಿಸಿದಂತೆ ನನ್ನ ಮತ್ತು ಶಿವಪ್ರಸಾದ್ ಶೆಟ್ಟಿರವರ ಮದ್ಯೆ ಯಾವುದೇ ಮಾತುಕತೆ ಆಗಿಲ್ಲ.

ಖಾಲಿ ಪತ್ರಗಳಿಗೆ ಶಿವಪ್ರಸಾದ್ ಶೆಟ್ಟಿಯವರು ನನ್ನ ಸಹಿಗಳನ್ನು ಪಡೆದಿರುವ ವಿಚಾರಕ್ಕೆ ಸಂಬಂಧಿಸಿದಂತೆ ಅವರ ವಿರುದ್ಧ ಪೋಲೀಸ್ ಠಾಣೆಗೆ ದೂರನ್ನು, ನ್ಯಾಯಾಲಯಕ್ಕೆ ಖಾಸಗಿ ಫಿರ್ಯಾದನ್ನು ಅಥವಾ ಇನ್ನಿತರೆ ಯಾವುದೇ ಕ್ರಿಮಿನಲ್ ಮೊಕದ್ದಮೆಯನ್ನು ಶಿವಪ್ರಸಾದ್ ಶೆಟ್ಟಿಯವರ ವಿರುದ್ಧ ನಾನು ಮಾಡಿಲ್ಲ. ಶಿವಪ್ರಸಾದ್ ಶೆಟ್ಟಿಯವರ ಜೊತೆ ನನಗೆ ಒಳ್ಳೆಯ ಬಾಂಧವ್ಯ ಇರುತ್ತದೆ. ಈ ದಾವೆಯಲ್ಲಿ ಕೂಡಾ ನನಗೆ ಶಿವಪ್ರಸಾದ್ ಶೆಟ್ಟಿಯವರ ವಿರುದ್ಧ ಯಾವುದೇ ಆರೋಪ ಇಲ್ಲ.

**2014-15** ರ ಸಾಲಿನ ನನ್ನ ಬ್ಯಾಂಕಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಲು ನನಗೆ ಆಕ್ಷೇಪಣೆ ಇಲ್ಲ. **2014-15** ರ ಸಾಲಿನ ನನ್ನ ಬ್ಯಾಂಕಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿದರೆ ಶಿವಪ್ರಸಾದ್ ಶೆಟ್ಟಿರವರು ತಮ್ಮ ಬ್ಯಾಂಕ್ ಖಾತೆ ಮೂಲಕ ನನ್ನ ಖಾತೆಗೆ **2** ಲಕ್ಷ ರೂ.ಗಳನ್ನು ವರ್ಗಾವಣೆ ಮಾಡಿರುವುದು ಗೊತ್ತಾಗುತ್ತದೆ ಎಂದರೆ ಸರಿ.

ನಿಪಿ-**22** ದಾಖಲೆಯಂತೆ ಶಿವಪ್ರಸಾದ್ ಶೆಟ್ಟಿರವರಿಗೆ **10** ಸೆಂಟ್ಸ್ ಜಾಗ ಮಾರಾಟ ಮಾಡಿರುವ ಬಗ್ಗೆ ನಿಮ್ಮ ತಕರಾರು ಏನಾದರೂ ಇದೆಯಾ ಎಂದರೆ ಸಾಕ್ಷಿಯು ಇದೆ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಸಾಕ್ಷಿಯ **ಮುಂದುವರಿದ ಪಾಟೀಸವಾಲಿ ಗೆ ಮಾನ್ಯ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ನೀಡಲಾಗಿದೆ.**

**(ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ**

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು

**ಪಾಟೀ ಸವಾಲುಗೆ:- ಕಾಲಾವಕಾಶ ಕೋರಿದ್ದು, ನೀಡಲಾಯಿತು.**